**ವಿಶ್ವದ ಕಲಾವಿದರೆಲ್ಲರ ಪಾಲಿಗೆ ಸೃಜನಶೀಲ ಸವಾಲಾಗಿ ಒದಗಗಿಬಂದಿರುವವರು ಮಹಾತ್ಮ ಗಾಂಧಿ. ಅವರ ಚಿತ್ರಗಳು ಎತ್ತರದ ಹೆಮ್ಮರದಂತೆ ಉದ್ದನೆಯ ಹೀರೊಯಿಕ್ ನಿರೂಪಣೆಗಳಲ್ಲ; ಅವು ಅಗಲಕ್ಕೆ ಹರಡುವ, ಎಲ್ಲರಿಗೂ ಹರಡುವ ಬಳ್ಳಿಗಳಂತೆ. ಹೀಗೆ ವಿಶ್ವರೂಪಿಯೂ ಬಹುರೂಪಿಯೂ ಆಗಿರುವ ಗಾಂಧಿಯನ್ನು ಕುರಿತ ಸಹಸ್ರ ಸಹಸ್ರ ಕಲಾಕೃತಿಗಳನ್ನೆಲ್ಲ ಒಟ್ಟಾಗಿ ಸೇರಿಸಿದರೆ ಬಾಪುವಿನ ಪರಿಪೂರ್ಣ ಚಿತ್ರವೊಂದು ನಮಗೆ ದೊರೆಯಬಹುದೆ?**

**ಎಚ್.ಎ. ಅನಿಲ್ ಕುಮಾರ್**

"ಎಷ್ಟೇ ಗಮನಿಸಿ ನೋಡು, ಭಾರತೀಯ ಕಲೆ ಹಾಗೂ ಸಿನಿಮಾಗಳಲ್ಲಿ ನಾವು ಪಾಶ್ಚಾತ್ಯರನ್ನು ಸ್ಮರಿಸಿಕೊಂಡಷ್ಟು ಅವರು ನಮ್ಮನ್ನು ಗುರ್ತಿಸುವುದಿಲ್ಲ. ತಾಜ್‌ಮಹಲ್, ಹಾವು, ಆನೆ ಮುಂತಾದ ಓರಿಯಂಟಲ್ ಗುಣಲಕ್ಷಣಗಳನ್ನು ಇನ್ನೂ ಕ್ಲೀಷೆಯಾಗಿ ಬಳಸುತ್ತಲೇ ಇದ್ದಾರೆ. ಅವರ ಕಲಾತ್ಮಕ ದೃಷ್ಟಿಯಲ್ಲಿ ಸಮಕಾಲೀನ ಭಾರತವು ಇಲ್ಲವೇ ಇಲ್ಲ ಎನ್ನುವಂತಾಗಿದೆ.''

ಭಾರತೀಯ ಗೆಳೆಯನೊಬ್ಬ ಗೊಣಗುತ್ತಲೇ ಇದ್ದುದನ್ನು ನೋಡಿ ಸಾಕಾಗಿ, ಯುರೋ–ಅಮೆರಿಕನ್ ಒಬ್ಬ ಪ್ರತಿಕ್ರಿಯಿಸಿದ್ದು ಹೀಗೆ: "ನಮ್ಮನ್ನು ನಿರೂಪಿಸುವಾಗ ಒಬ್ಬ ಮೈಕೆಲ್ ಜಾಕ್ಸನ್, ಸ್ಪಿಲ್‌ಬರ್ಗ್, ಮಾಡರ್ನ್ ಆರ್ಟ್, ನಿರ್ವಚನವಾದ, ಇವೆಲ್ಲ 'ಖಂಡ'ವಾಗಿ ಮಾತ್ರ ನಿಮ್ಮಲ್ಲಿ ಮೂಡಿಬರುತ್ತಿವೆ. ಆದರೆ ನಾವು ಭಾರತವನ್ನು ಅಪರೂಪಕ್ಕಾದರೂ ಗಮನಿಸುವ ಸಂದರ್ಭದಲ್ಲಿ, ಎಲ್ಲ ಕಾಲಕ್ಕೂ ಎಲ್ಲ ಮೌಲ್ಯಗಳಿಗೂ ಹೊಂದುವಂತಹ ಅಖಂಡ ಗಾಂಧಿಯನ್ನು, ಅವರ ತತ್ತ್ವವನ್ನು ಆಗಾಗ ರೆಫರ್ ಮಾಡುತ್ತಿರುತ್ತೇವೆ. ನಿಮ್ಮ ಖಂಡ ಕಾವ್ಯಕ್ಕೆ ನಮ್ಮದು ಅಖಂಡ ಶೀರ್ಷಿಕೆ ಎಂಬುದನ್ನು ಮರೆಯಬೇಡಿ!"

'ತಾನು ಚಿಕ್ಕ ವಯಸ್ಸಿನಲ್ಲಿ ಚಿತ್ರ ಬರೆಯುವುದನ್ನು ಅಭ್ಯಾಸ ಮಾಡಿದ್ದಲ್ಲಿ ತನ್ನ ಅಕ್ಷರಗಳು ಲಕ್ಷಣವಾಗಿರುತ್ತಿದ್ದವು' ಎಂದು ಒಂದೆಡೆ ಮಹಾತ್ಮ ಗಾಂಧಿ ಸರಳವಾಗಿ ಬರೆದುಕೊಂಡಿದ್ದಾರೆ. ಸೌಂದರ್ಯ ಶಾಸ್ತ್ರವನ್ನು ಕುರಿತು ಮಹತ್ತ್ವದ ಭಾರತೀಯ ಲೇಖಕರ ದೃಷ್ಟಿಕೋನಗಳನ್ನು ಗಮನಿಸಿದರೆ, ಗಾಂಧಿಯ ಕೊಡುಗೆ ಅತಿ ಕ್ಷೀಣವಾದುದು. ಕಲಾ ಸೃಷ್ಟಿಕರ್ತರಾಗುವ ಬದಲು, ಕಲೆಯ ಸೃಷ್ಟಿಗೆ ಸ್ವತಃ ತಾವೇ ಅಗಮ್ಯ ವಸ್ತುವಾಗಿ ಒದಗಿ ಬಂದವರು ತೀರ ಅಪರೂಪ. ಬೇಲೂರು, ಹಳೇಬೀಡುಗಳ ಶಿಲಾಬಾಲಿಕೆಯರನ್ನು ಗಾಂಧೀಜಿ ಮೆಚ್ಚಿದ್ದು ಒಂದು ಜನಪ್ರಿಯ ಪ್ರಸಂಗದ ಐತಿಹ್ಯವಷ್ಟೇ. ವಿಶ್ವೇಶ್ವರಯ್ಯನವರು ಜೋಗವನ್ನು ನೋಡಿ, 'ಎಷ್ಟು ಶಕ್ತಿ ವ್ಯಯವಾಗುತ್ತಿದೆ' ಎಂಬ ನುಡಿಯಂತಿದು.

ಪ್ರಾಯಶಃ ಗಾಂಧೀಜಿಗೂ ದೃಶ್ಯಕಲೆಗೂ ನಡುವೆ ಇದ್ದ ಏಕೈಕ ಸೇತುವೆ ರವೀಂದ್ರನಾಥ್ ಟ್ಯಾಗೋರ್. 'ಶಾಂತಿನಿಕೇತನ ಕಲಾಶಾಲೆ'ಯನ್ನು ನಿರ್ಮಿಸುವ ಸಲುವಾಗಿ ಟ್ಯಾಗೋರ್ ದೆಹಲಿಗೆ ಸಾಂಕೇತಿಕ ಚಂದಾಪಾತ್ರೆ ತೆಗೆದುಕೊಂಡು ಹೋದಾಗ, ಗಾಂಧೀಜಿ ತಮ್ಮ ಪರಿಚಿತ ಟಾಟಾ–ಬಿರ್ಲಾ ಅಂತಹವರ ಮೂಲಕ ಆ ಕಾಲಕ್ಕೆ ಸುಮಾರು ಐದು ಸಾವಿರ ರೂಪಾಯಿಗಳಷ್ಟು ದೊಡ್ಡ ಮೊತ್ತವನ್ನು